ರಾಣೆಬೆನ್ನೂರು ತಾಲ್ಲೂಕಿನ ತುಮ್ಮಿನ ಕಟ್ಟೆಯಲ್ಲಿ ಟ್ರಾನ್ಸ್ ಫಾರ್ಮರ್ ಅಳವಡಿಸುದು

262(487) ಶ್ರೀ ಉಜ್ಜೈನೇಶ್ವರ ಬಸವನಪ್ಪ ಬಣಕಾರ್ (ಹಿರೇಕೆರೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೇಬೆನ್ನೂರು ತಾಲ್ಲೂಕು ತುಮ್ಮಿನ ಕಟ್ಟೆಯಲ್ಲಿ ಸ್ಥಾಪಿಸುತ್ತಿರುವ 5ಎಂ.ವಿ ಎ ಟ್ರಾನ್ಸ್‌ಫಾರ್ಮರನ್ನು ಎಂದು ಚಾರ್ಜ್‌ಮಾಡಲಾಗುವುದು

ಶ್ರೀಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ರಾಣೇಬೆನ್ನೂರು ತಾಲ್ಲೂಕು, ತುಮ್ಮಿನಕಟ್ಟೆ 33:11ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಪ್ರಸ್ತುತ ಒಂದು 5ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್ ಚಾಲನೆಯಲ್ಲಿದೆ. ಈವಿದ್ಯುತ್ ವಿತರಣಾ ಕೇಂದ್ರದಲ್ಲಿಇನ್ನೊಂದು 5ಎಂ.ವಿ.ಎ. ಪವರ್ ಟ್ರಾನ್ಸ್‌ಫಾರ್ಮರನ್ನು ಹೆಚ್ಚುವರಿಯಾಗಿ ಅಳವಡಿಸುವ ಕಾರ್ಯವು ತೀವ್ರ ಪ್ರಗತಿಯಲ್ಲಿದ್ದು, ಈ ಕಾರ್ಯವನ್ನು ಏಪ್ರಿಲ್99ರ ಅಂತ್ಯದೊಳಗೆ ಪೂರ್ಣಗೊಳಿಸಿ, ಸದರೀ ಪವರ್‌ಟ್ರಾನ್ಸ್‌ಫಾರ್ಮರನ್ನು ಚಾಲನೆ ಗೊಳಿಸಲಾಗುವುದು.

ಘಟಪ್ರಭಾ ಬಲದಂಡೆ ಕಾಲುವೆ ದಾಸನಾಳಯ ದಾಸನಾಳ ಸುರಂಗ ಮಾರ್ಗದ ಕಾಮಗಾರಿ

266(499) ಶ್ರೀನಾಯಕ ಚಂದ್ರಶೇಖರ್ ಸದಾಶಿವ (ಗೋಕಾಕ್) : ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಘಟಪ್ರಭಾ ಬಲದಂಡೆ ಕಾಲುವೆಯ ದಾಸನಾಳ ಸುರಂಗ ಮಾರ್ಗರಚನೆ ಕಾರ್ಯ ಕೆಲಸ ಯಾವ ಹಂತದಲ್ಲಿದೆ;

ಆ) ಸದರಿ ಸುರಂಗ ಮಾರ್ಗವನ್ನು ಪೂರ್ಣಗೊಳಿಸಲು ಬೇಕಾದ ಅವಧಿ ಎಷ್ಟು;

ಇ) ಸದರೀ ಕಾಮಗಾರಿಗೆ ಒದಗಿಸಲಾದ ಹಣ ಎಷ್ಟು?

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು) :

ಅ) ಪ್ರವೇಶದ್ವಾರ ಮತ್ತು ಹೊರದ್ವಾರದ ಅಗೆತವು 167955 ಘೆಮೀ.ದಷ್ಟು ಇದ್ದು ಈಗ118154 ಘೆಮೀ.ದಷ್ಟು ಅಗೆತ ಪೂರ್ಣಗೊಂಡಿದೆ. ದಿನಾಂಕ:5-2-99ರಂದು ಸುರಂಗ ಮಾರ್ಗ ಕೊರೆಯುವ ಕೆಲಸ ಪ್ರಾರಂಭಿಸಲಾಗಿದ್ದು ಅದು ಪ್ರಗತಿಯಲ್ಲಿದೆ.

ಆ) ಸುರಂಗ ಮಾರ್ಗ ಪೂರ್ಣಗೊಳಿಸಲು ಇನ್ನು ಸುಮಾರು 18 ತಿಂಗಳುಗಳ ಕಾಲಾವಕಾಶ ಬೇಕಾಗಿದೆ.

ಇ) ಸದರಿ ಕಾಮಗಾರಿಗೆ ಇಲ್ಲಿಯವರೆಗೆ ರೂ.360 ಲಕ್ಷಗಳಅನುದಾನ ಒದಗಿಸಲಾಗಿದೆ ಮತ್ತು ರೂ.81.37 ಲಕ್ಷದಷ್ಟು ಪ್ರಗತಿ ಸಾಧಿಸಲಾಗಿದೆ.